GATWU Garment and Textile Workers Union
ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್
*(Affiliated to New Trade Union Initiative – NTUI)*

**ಆತ್ಮೀಯ ಎವೆರಿ ಡೆನಿಸನ್ ಕಾರ್ಮಿಕ ಸಂಗಾತಿಗಳೇ,**

ಎವೆರಿ ಡೆನಿಸನ್ ಕಂಪನಿಯ ಎಲ್ಲಾ ಕಾರ್ಮಿಕರು ಒಗ್ಗಟ್ಟಾಗಿ ಸೇರಿಕೊಳ್ಳುವ ಮೂಲಕ ಅದ್ಭುತವಾದ ವಿಜಯವನ್ನು ಸಾಧಿಸಿದ್ದೇವೆ. ಎಲ್ಲಾ ಕಂಪನಿಗಳ ಆಡಳಿತ ವರ್ಗದವರು ಯಾವಾಗಲೂ ಕಾರ್ಮಿಕರನ್ನು ವಿಭಜಿಸಿ, ಒಡೆದು ಆಳುವ ನೀತಿಯನ್ನು ಅನುಸರಿಸಿಕೊಂಡು ಬರುತ್ತಾರೆ. ಎವೆರಿ ಡೆನಿಸನ್ ಕಂಪನಿಯು ಸಹ ಇಲ್ಲಿಯವರೆಗೂ ನಮ್ಮನ್ನೆಲ್ಲಾ ಒಡೆದು ಬೇರೆ ಬೇರೆಯಾಗಿ ಇರುವಂತೆ ನೋಡಿಕೊಂಡು ಬರುತ್ತಿತ್ತು. ನಾವೆಲ್ಲರೂ ಇಂದು ಒಗ್ಗಟ್ಟಾಗಿ ಸೇರಿರುವುದು ಅಸಾಧಾರಣವಾದ ಸಾಧನೆಯಾಗಿದೆ.

ಈಗ ಮತ್ತೊಮ್ಮೆ ಆಡಳಿತ ವರ್ಗವು ನಮ್ಮನ್ನು ಒಡೆದು ಬೇರೆ ಬೇರೆ ಮಾಡಲು ಪ್ರಯತ್ನಿಸುತ್ತಿದೆ. ಇದನ್ನು ವಿರೋಧಿಸುವುದೇ ನಮ್ಮ ಏಕೈಕ ದೊಡ್ಡ ಸವಾಲು ಮತ್ತು ನಮ್ಮ ಏಕತೆಯೇ ನಮಗೆ ದೊಡ್ಡ ಶಕ್ತಿಯಾಗಿದೆ.

ಕಳೆದ ಒಂದು ತಿಂಗಳಿನಿಂದ ಕಂಪನಿಯ ಆಡಳಿತ ವರ್ಗಕ್ಕೆ ನಾವು ಹಲವಾರು ಪತ್ರಗಳನ್ನು ಕಳುಹಿಸಿದ್ದೇವೆ. ನಾವು ಎವೆರಿ ಡೆನಿಸನ್ ಕಾರ್ಮಿಕ ಸಂಘಕ್ಕೆ ಸದಸ್ಯರಾಗಿದ್ದೆವು, ಇನ್ನು ಮುಂದೆ ಆ ಸಂಘದಲ್ಲಿ ನಮ್ಮ ಸದಸ್ಯತ್ವವನ್ನು ಮುಂದುವರೆಸಲು ಇಚ್ಛೆಯಿಲ್ಲದೆ ನಾವೆಲ್ಲರೂ ರಾಜೀನಾಮೇ ಸಲ್ಲಿಸಿದ್ದೇವೆ, ಆದ್ದರಿಂದ ನಮ್ಮ ವೇತನದಲ್ಲಿ ಕಡಿತಗೊಳಿಸುತ್ತಿದ್ದ ಯೂನಿಯನ್ ಶುಲ್ಕವನ್ನು ಕಡಿತಗೊಳಿಸುವುದನ್ನು ನಿಲ್ಲಿಸಬೇಕೆಂದು ಸಹ ಪತ್ರವನ್ನು ಬರೆದಿದ್ದೆವು. ಆದರೆ ಆಡಳಿತ ವರ್ಗವು ಇದನ್ನು ಮನ್ನಿಸದೇ ಹಲವು ಕಾರ್ಮಿಕರಿಗೆ ಎವೆರಿ ಡೆನಿಸನ್ ಕಾರ್ಮಿಕ ಸಂಘದ ಯೂನಿಯನ್ ಶುಲ್ಕವನ್ನು ಕಡಿತಗೊಳಿಸುವುದನ್ನು ಮುಂದುವರೆಸಿದೆ. ಇದು ನಮ್ಮ ಏಕತೆಯನ್ನು ಒಡೆಯಲು ಹಾಗೂ ಒಗ್ಗಟ್ಟನ್ನು ಪರೀಕ್ಷಿಸುವ ಮತ್ತೊಂದು ಪ್ರಯತ್ನವಾಗಿದೆ.

ಎವೆರಿ ಡೆನಿಸನ್ (ಇಂಡಿಯಾ) ಪ್ರೈ. ಲಿ. ನ ಆಡಳಿತ ವರ್ಗಕ್ಕೆ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ದಿನಾಂಕ 11.07.2018 ರಂದು ಮತ್ತೊಂದು ಪತ್ರವನ್ನು ಬರೆದಿತ್ತು. ಅದರಲ್ಲಿ, ಕೆಲವು ಕಾರ್ಮಿಕರನ್ನು ಹೊರತು ಪಡಿಸಿ ಉಳಿದ ಬಹು ಸಂಖ್ಯೆಯ ಕಾರ್ಮಿಕರು GATWU ಸದಸ್ಯರಾಗಿವುದರಿಂದ ಅವರಿಗೆ ಸದಸ್ಯರ ಪಟ್ಟಿ ಮತ್ತು ಕೆಲವು ಬೇಡಿಕೆಗಳ ಪಟ್ಟಿಯನ್ನು ಕಳುಹಿಸಿಲಾಗಿತ್ತು ಮತ್ತು ತಕ್ಷಣವೇ ಯೂನಿಯನ್ ಸಮಿತಿಯ ಸಭೆಯನ್ನು ಕರೆದು ಸಭೆ ನಡೆಸಿ ಚರ್ಚಿಸಬೇಕೆಂದು ಕೋರಲಾಗಿತ್ತು.

ನಮ್ಮ ತಕ್ಷಣದ ಬೇಡಿಕೆಗಳು ಏನಿತ್ತು?

1. ಕಳೆದ ಏಪ್ರಿಲ್ 2018 ರಿಂದ ಏಕಪಕ್ಷೀಯವಾಗಿ ಆಡಳಿತ ವರ್ಗದವರು ಕಡಿತಗೊಳಿಸಿರುವ ಹೆಚ್.ಆರ್.ಎ, ವಾಹನ ಭತ್ಯೆ, ಮತ್ತು ಇತರೇ ಭತ್ಯೆಗಳನ್ನು ಹಿಂದಿರುಗಿಸಬೇಕು.
2. ಕಂಪನಿಯು ಯೂನಿಯನ್‌ಗೆ ಸೂಚನಾ ಫಲಕ ಹಾಕಲು ಮತ್ತು ಪದಾಧಿಕಾರಿಗಳ ಸಭೆಯನ್ನು ನಡೆಸಲು ಸ್ಥಳಾವಕಾಶವನ್ನು ಕೊಡಬೇಕು.

ನಂ.17/1, 1ನೇ ಮಹಡಿ, ಹೊಸ ಗುಡ್ಡದಹಳ್ಳಿ, ಬಾಲಾಜಿ ಕಲ್ಯಾಣ ಮಂಟಪದ ಹತ್ತಿರ, ಮೈಸೂರು ರಸ್ತೆ, ಬೆಂಗಳೂರು–560026

Scanned with OKEN Scanner

- ಸಂಗಾತಿಗಳೇ ನಾವು ಕೇಳುತ್ತಿರುವ ಬೇಡಿಕೆಗಳು ನ್ಯಾಯ ಸಮ್ಮತವಲ್ಲವೇ?
- ಆಡಳಿತ ವರ್ಗವು ಈ ವಿಷಯಗಳಿಗೆ ಸಂಬಂಧ ಪಟ್ಟಂತೆ ನಮ್ಮ ಜೊತೆ ಏಕೆ ಮಾತನಾಡುತ್ತಿಲ್ಲ?
- ನಮ್ಮ ಈ ಮೇಲಿನ ಬೇಡಿಕೆಗಳು ಕಾನೂನು ಬಾಹಿರವಾಗಿವೆಯೇ?

ಆಡಳಿತ ವರ್ಗವು ನಮ್ಮ ಏಕತೆ ಮತ್ತು ಶಕ್ತಿಯನ್ನು ಕಂಡು ನಮ್ಮನ್ನು ಹೇಗಾದರೂ ಮಾಡಿ ಒಡೆಯಲು ಹಲವಾರು ಗಾಳಿ ಸುದ್ದಿಗಳು ಮತ್ತು ಭಯವನ್ನು ಹುಟ್ಟು ಹಾಕುತ್ತಿದೆ.

ನಾವು ಈ ಯೂನಿಯನ್ ಅನ್ನು recognize ಮಾಡುವುದಿಲ್ಲ. ಕಾರ್ಖಾನೆಯನ್ನು ಮುಚ್ಚಲಾಗುತ್ತದೆ, ನೀವೆಲ್ಲರೂ ಕೆಲಸ ಕಳೆದುಕೊಳ್ಳುತ್ತೀರಿ ಎಂದು ಕಾರ್ಮಿಕರಲ್ಲಿ ಭಯದ ವಾತಾವರಣವನ್ನು ಆಡಳಿತ ವರ್ಗವು ಸೃಷ್ಟಿಸುತ್ತಿದೆ. ಬಹು ಸಂಖ್ಯಾತ ಕಾರ್ಮಿಕರ ಬೆಂಬಲವನ್ನು ಹೊಂದಿರುವ ಸಂಘಟನೆಯನ್ನು recognize ಮಾಡುವುದು ಆಡಳಿತ ವರ್ಗದ ಕರ್ತವ್ಯವಾಗಿದೆ. ಕನಿಷ್ಟ ಬೆಂಬಲವನ್ನು ಹೊಂದಿರುವ ಸಂಘಟನೆಯನ್ನು recognize ಮಾಡುವ ಹಾಗಿಲ್ಲ.

ಆಡಳಿತ ವರ್ಗದವರು ಯಾವುದೇ ಕಾರಣಕ್ಕೂ ಮರೆಯಬಾರದು, ಈ ದೇಶದಲ್ಲಿ ಕಾರ್ಮಿಕರ ರಕ್ಷಣೆಗಾಗಿ ಹಲವಾರು ಕಾನೂನುಗಳು ಇವೆ, ಏಕಾಏಕಿ ಕಾರ್ಖಾನೆಗಳನ್ನು ಮುಚ್ಚಿಕೊಂಡು ಹೋಗಲು ಸಾಧ್ಯವಿಲ್ಲ. ನಮಗೆ ಈ ದೇಶದ ಮತ್ತು ಪ್ರಪಂಚದಾದ್ಯಂತ ಬೇರೆ ಬೇರೆ ದೇಶದ ಕಾರ್ಖಾನೆಯ ಕಾರ್ಮಿಕರು ತಮ್ಮ ಬೆಂಬಲವನ್ನು ತೋರಿಸುತ್ತಿದ್ದಾರೆ. ಭಾರತವಲ್ಲದೇ ಬೇರೆ ಬೇರೆ ದೇಶದಲ್ಲಿ ಇರುವ ಎವೆರಿ ಡೆನಿಸನ್ ಕಾರ್ಖಾನೆಯಲ್ಲಿ ದುಡಿಯುತ್ತಿರುವ ನಮ್ಮ ಸಹ ಕಾರ್ಮಿಕರು ಮತ್ತು ನಾವು ತಯಾರಿಸುತ್ತಿರುವ ವಸ್ತುಗಳನ್ನು ಪಡೆದುಕೊಳ್ಳುತ್ತಿರುವ ಕಂಪನಿಗಳೂ ಸಹ ನಮ್ಮ ಜೊತೆಯಲ್ಲಿ ನಿಂತಿವೆ.

ಸಂಗಾತಿಗಳೇ ಇದೆಲ್ಲದ್ದರಿಂದ ನಾವು ತಿಳಿದುಕೊಳ್ಳಬೇಕಾಗಿದ್ದು ಏನೆಂದರೆ:–

- **ನಮ್ಮ ಬೇಡಿಕೆಗಳು ನ್ಯಾಯ ಸಮ್ಮತವಾಗಿವೆ.**
- **ನಾವು ಸಂಘಟಿತರಾಗಿ ಉಳಿಯೋಣ, ಏಕತೆಯೇ ನಮ್ಮ ಶಕ್ತಿ.**
- **ನಾವು ಹೋರಾಡುತ್ತೇವೆ ಮತ್ತು ನಾವು ಗೆದ್ದೇ ಗೆಲ್ಲುತ್ತೇವೆ.**

*********



Scanned with OKEN Scanner